# ನಕ್ಷತ್ರ ಮೋಹ


ನಾಗೇಶ ಹೆಗಡೆ

ಸ್ವಪ್ನಮುದ್ರಿತ ನಕ್ಷತ್ರಗಣ್ಣು
ತಿರುಗಲಾರಂಭಿಸಿದ ಹಾಗೆ
ಮರ ಉರುಳುವ ಸದ್ದು
ಬೆಳದಿಂಗಳಲಿ

ದೇವಲೋಕದ ಅಪ್ಸರೆ
ಕೇಸರಿ ಹೂವಿನ ನಿತಂಬಿನಿ
ಪಾರಿಜಾತಾ

ನಾನೋ ಕನಸುಣಿ
ನೀನು ರುದ್ರಕನ್ನಿಕೆ

ಸ್ವರ್ಗದ ನವ ವಧುವಿನಂತೆ
ಸಿಂಗರಿಸಿಕೊಂಡು ನೀನು
ನನಗೋಸ್ಕರ ಮತ್ತೊಮ್ಮೆ
ಇಳಿದು ಬರುವುದಾದರೆ ಆ
ತಾರಾಲೋಕದಿಂದ

ಅಜಾನಿನ ಕೂಗಿಗಿಂತಲೂ
ನಿನ್ನ ಬಳೆಗಳ ಸದ್ದು ನನಗೆ ರೋಮ ಹರ್ಷಕ
ನಿನ್ನ ರೆಕ್ಕೆಗಳ ಕತ್ತರಿಸಿ ಚುಕ್ಕೆಗಳ ನಡುವೆ
ಬಚ್ಚಿಡುವ ಆ ಸ್ವರ್ಗಕ್ಕೂ ನನ್ನ ಧಿಕ್ಕಾರ

ನಿನ್ನ ಲಿಂಗಾಂಗದೊಳಗೆ
ಬೆರಳು ಹಾಕಿ ಖುಷಿ ಪಡಿಸುವ ಈ ಮರ್ತ್ಯಕ್ಕೂ !

★ಪಾರಿಜಾತ – ಧರೆಗಿಳಿದು ಬಂದ ದೇವಲೋಕದ ಪುಷ್ಪವೆಂಬ ಐತಿಹ್ಯವಿದೆ.

● **ಆರಿಫ್‌ರಾಜಾ**